# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

CIN ; U40109KA2004SGC035177
ನೊಂದಾಯಿತ ಕಛೇರಿ ವಿಳಾಸ ನಂ 29
ಕಾವೇರಿ ಗ್ರಾಮೀಣ ಬ್ಯಾಂಕ್ ರಸ್ತೆರವರ ಕಛೇರಿ
ವಿಜಯನಗರ 2 ನೇಹಂತ ಮೈಸೂರು-570017

ನಿಗಮ ಇ-ಮೇಲ್ : WWW.CESCMYSORE.ORG

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕಾ ಮತ್ತು ಪಾ ಉಪ ವಿಭಾಗ
ಚಾ.ವಿ.ಸ.ನಿ.ನಿ., ಸರಗೂರು
Ph.: 08228 – 265678
email:aeecescsarguru,@gmail.com


ಸಂಖ್ಯೆ:ಸಕಾನಿಇಂ(ವಿ)/ಸರಗೂರು/ಸಇಂ(ತಾ)/2019-20/ 1238

ದಿನಾಂಕ: 8.1.2020

ದಿನಾಂಕ 19.12.2019 ರಂದು ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಶ್ರೀ ಎ ಎ ಸುನಿಲ್‌ಕುಮಾರ್ ರವರ ಅಧ್ಯಕ್ಷತೆಯಲ್ಲಿ ನಡೆದ ಸರಗೂರು ಕಾರ್ಯ ಮತ್ತು ಪಾಲನ ಉಪವಿಭಾಗದ ಗ್ರಾಹಕರ ಸಂಪರ್ಕ ಸಭೆಯ ನಡಾವಳಿಗಳು.

ಸಭೆಯಲ್ಲಿ ಹಾಜರಿದ್ದವರು

1. ಶ್ರೀ ಶ್ರೀಧರ್ ಎಸ್, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಕಾರ್ಯ ಮತ್ತು ಪಾಲನಾ ಉಪ ವಿಭಾಗ ಚಾವಿಸನಿನಿ., ಸರಗೂರು
2. ಶ್ರೀ ವೆಂಕಟೇಶ್.ಎಸ್ ಸಹಾಯಕ ಇಂಜಿನಿಯರ್(ತಾ) ಕಾರ್ಯ ಮತ್ತು ಪಾಲನಾ ಉಪ ವಿಭಾಗ ಚಾವಿಸನಿನಿ., ಸರಗೂರು
3. ಶ್ರೀ ಅಶೋಕ ಟಿ ಬಿ ಸಹಾಯಕ ಇಂಜಿನಿಯರ್ (ವಿ) ಶಾಖಾಧಿಕಾರಿಗಳು ಚಾವಿಸನಿನಿ., ಸರಗೂರು
4. ಶ್ರೀ ದೀಪಕ್ ಡಿ ಕಿರಿಯ ಇಂಜಿನಿಯರ್ (ವಿ) ಶಾಖಾಧಿಕಾರಿಗಳು ಚಾವಿಸನಿನಿ., ಬಿ.ಮಟಕೆರೆ
5. ಶ್ರೀ ಪ್ರಕಾಶ ಪಾಟೀಲ್ ಕಿರಿಯ ಇಂಜಿನಿಯರ್(ಪ್ರ) ಶಾಖಾಧಿಕಾರಿಗಳು, ಅಂತರಸಂತೆ

ಸಭೆಯಲ್ಲಿ ಉಪಸ್ಥಿತರಿದ್ದಂತಹ ಎಲ್ಲಾ ಅಧಿಕಾರಿಗಳು ಹಾಗೂ ವಿದ್ಯುತ್ ಗ್ರಾಹಕರುಗಳನ್ನು ಸ್ವಾಗತಿಸಿ ಸಭೆ ಪ್ರಾರಂಭಿಸಲಾಯಿತು.

ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರು ವಿದ್ಯುತ್ ಗ್ರಾಹಕ ಜನ ಸಂಪರ್ಕ ಸಭೆಯ ಮಹತ್ವದ ಬಗ್ಗೆ ತಿಳಿಸುತ್ತಾ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ನಿರ್ದೇಶನದ್ವಯ ಸರಗೂರು ಉಪವಿಭಾಗ ಮಟ್ಟದಲ್ಲಿ ಗ್ರಾಹಕ ಸಂಪರ್ಕ ಸಭೆಯನ್ನು ನಡೆಸಲಾಗುವುದು. ಈ ಸಭೆಯಲ್ಲಿ ಉಪವಿಭಾಗ ವ್ಯಾಪ್ತಿಯ ಗ್ರಾಹಕರುಗಳು ಭಾಗವಹಿಸಿ ವಿದ್ಯುತ್ ಸರಬರಾಜಿನ ಕುಂದುಕೊರತೆಗಳ ಬಗ್ಗೆ ಚರ್ಚಿಸಿ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಸೇವೆಯನ್ನು ಉನ್ನತೀಕರಿಸಲು ಅಗತ್ಯವಿರುವ ಸಲಹೆ ಸೂಚನೆಗಳನ್ನು ನೀಡಬಹುದಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.ತದನಂತರದಲ್ಲಿ ಈ ಹಿಂದೆ ದಿನಾಂಕ 11.06.2019 ರಂದು ನಡೆದ ಸಭೆಯಲ್ಲಿ ಸ್ವೀಕೃತವಾದ 05 ಅರ್ಜಿಗಳಲ್ಲಿ 05 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ ಎಂದು ಸಭೆಯಲ್ಲಿ ಹಾಜರಿದ್ದವರಿಗೆ ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ತಿಳಿಸಿದರು.

ಸಭೆಯಲ್ಲಿ ತಿಳಿಸಿದಂತಹ ಅಹವಾಲುಗಳು

| ಕ್ರ. ಸಂ | ಅಹವಾಲುದಾರರ ಹೆಸರು ಮತ್ತು ವಿಳಾಸ | ಸಮಸ್ಯೆಗಳ ವಿವರ | ತೆಗೆದುಕೊಂಡ ಕ್ರಮ |
|---|---|---|---|
| 1. | ಹರೀಶ<br>ಚನ್ನೇಗೌಡನಹುಂಡಿ ಗ್ರಾಮ<br>9900992410 | 1. UNIP ಯೋಜನೆ ಅಡಿಯಲ್ಲಿ ಹೆಚ್ಚುವರಿ ಪರಿವರ್ತಕ ಕಾಮಗಾರಿ ಮಾಡದಿರುವ ಬಗ್ಗೆ ಹಾಗೂ ಐಪಿ ಪರಿವರ್ತಕದ ವೋಲ್ಟೇಜ್ ಸಮಸ್ಯೆ ಬಗ್ಗೆ. | ಮಾನ್ಯ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದರು ಹಾಗೂ ಕಾಮಗಾರಿ ವಿಳಂಬದ ಬಗ್ಗೆ ಮಾಹಿತಿಯನ್ನು ನೀಡಿರುತ್ತಾರೆ. |

| | | | |
|---|---|---|---|
| | | | |
| 2. | ಶಿವಲಿಂಗಯ್ಯ<br>ಯಶವಂತಪುರ<br>9743518449 | 1. ಹೆತ್ತಗೆ ಗ್ರಾಮಕ್ಕೆ ಹೊಸದಾಗಿ ಬೀದಿದೀಪ ನಿರ್ವಹಣೆ ಅಡಿ ವಿದ್ಯುತ್ ಕಂಬ ಅಳವಡಿಸಲು ಕೋರಿರುತ್ತಾರೆ.<br>2. ನಿರಂತರ ಜ್ಯೋತಿ ಮೂಲಕ ವಿದ್ಯುತ್ ಸಂಪರ್ಕ ಮಾಡವುದು, | ಮಾನ್ಯ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಮೇಲಿನ ವಿಷಯದ ಬಗ್ಗೆ ಕಾಮಗಾರಿ ಪ್ರಗತಿಯಲ್ಲಿದ್ದು ಕಾಮಗಾರಿ ಮುಗಿದ ನಂತರ ಚಾಲನೆ ಮಾಡಲಾಗುವುದು. |
| 3. | ಸಂತೋಷ್<br>ಬೀಚನಹಳ್ಳಿ | 1. ಬೀಚನಹಳ್ಳಿ ಭಾಗದಲ್ಲಿ ಪವರ್ ಸ್ಟೇಷನ್ ನಿರ್ಮಿಸುವ ಬಗ್ಗೆ.<br>2. ನಿರಂತರ ಜ್ಯೋತಿ ವಿದ್ಯುತ್ ಸರಬರಾಜಿನಲ್ಲಿ ನಿರಂತರ ವಿದ್ಯುತ್ ವ್ಯತ್ಯಯವಾಗುತ್ತಿರುವ ಬಗ್ಗೆ.<br>3. ಕಂದಾಯ ವಸೂಲಾತಿಯ ಸಮಯದಲ್ಲಿ ಪವರ್‌ಮ್ಯಾನ್‌ಗಳು ವಿದ್ಯುತ್ ಸಂಬಂದಿತ ದೂರುಗಳನ್ನು ಸರಿಪಡಿಸದಿರುವ ಬಗ್ಗೆ. | ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಶಾಖಾಧಿಕಾರಿಗಳಿಗೆ ಸ್ಥಳ ಪರಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದರು ಹಾಗೂ ಗ್ರಾಹಕರಿಗೆ ಆಗುತ್ತಿರುವ ತೊಂದರೆ ತಪ್ಪಿಸಲು ಕ್ರಮಕೈಗೊಳ್ಳುವುದಾಗಿ ತಿಳಿಸಿದರು. |
| 4. | ರವಿಕುಮಾರ್,<br>ಬಿ.ಮಟಕೆರೆ | 3. ನಿರಂತರ ಜ್ಯೋತಿ ವಿದ್ಯುತ್ ಸರಬರಾಜಿನಲ್ಲಿ ನಿರಂತರ ವಿದ್ಯುತ್ ವ್ಯತ್ಯಯವಾಗುತ್ತಿರುವ ಬಗ್ಗೆ. | ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಮೇಲಿನ ವಿಷಯದ ಬಗ್ಗೆ ಕಾಮಗಾರಿ ಪ್ರಗತಿಯಲ್ಲಿದ್ದು ಕಾಮಗಾರಿ ಮುಗಿದ ನಂತರ ಚಾಲನೆ ಮಾಡಲಾಗುವುದು. |
| 5 | ಭೋಗಯ್ಯ<br>ಬೀರಂಬಳ್ಳಿ ಗ್ರಾಮ | 1. ಬೀರಂಬಳ್ಳಿ ಗ್ರಾಮದಲ್ಲಿ ವಿದ್ಯುತ್ ತಂತಿ ಜೋತು ಬಿದ್ದಿದ್ದು ಮಧ್ಯಂತರ ಕಂಬಗಳನ್ನು ಅಳವಡಿಸುವ ಬಗ್ಗೆ.<br>2. ಬೀರಂಬಳ್ಳಿ ಗ್ರಾಮದ ವ್ಯಾಪ್ತಿಯಲ್ಲಿ ವಿದ್ಯುತ್ ಲೈನ್ ಬಳಿ ಇರುವ ಮರಗಳನ್ನು ತೆರವುಗೊಳಿಸುವ ಬಗ್ಗೆ. | ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಶಾಖಾಧಿಕಾರಿಗಳಿಗೆ ಸ್ಥಳ ಪರಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದರು |
| 6 | ದೇವೇಶ್<br>ಎನ್ ಬೆಳ್ತೂರು ಗ್ರಾಮ<br>9686607959 | ಎನ್ ಬೆಳ್ತೂರು ಹಳೇಗೇಟ್ ಗ್ರಾಮದ 100 ಕೆವಿಎ ಐಪಿ ಪರಿವರ್ತಕ ಓವರ್‌ಲೋಡ್ ಆಗಿರುವ ಬಗ್ಗೆ. | ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲು ಶಾಖಾಧಿಕಾರಿಗಳಿಗೆ ಸೂಚಿಸಿರುತ್ತಾರೆ. |

ಸಭೆಯ ಕೊನೆಯಲ್ಲಿ ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್‌ರವರು ವಿದ್ಯುತ್ ಗ್ರಾಹಕರಿಂದ ಕೇಳಿಬಂದಂತಹ ದೂರುಗಳು ಹಾಗೂ ಕುಂದುಕೊರತೆಗಳ ಬಗ್ಗೆ ಸವಿವರವಾಗಿ ಮಾತನಾಡಿ ಸಭೆಯಲ್ಲಿಯೇ ಕೆಲವು ಅಹವಾಲುಗಳಿಗೆ ಸಂಭಂದಿಸಿದಂತೆ ಪರಿಹಾರ ಮಾರ್ಗೋಪಾಯಗಳನ್ನು ಅಧಿಕಾರಿಗಳಿಗೆ ತಿಳಿಸಿ ಹಾಗೂ ಇತರೆ ಅಹವಾಲುಗಳಿಗೆ ಸಂಬಂಧಪಟ್ಟಂತೆ ಅಧಿಕಾರಿಗಳು ಸ್ಥಳ ಪರಿಶೀಲಿಸಿ ನಿಯಮಾನುಸಾರ ಕ್ರಮಕೈಗೊಂಡು ತೆಗೆದುಕೊಂಡ ಕ್ರಮದ ಬಗ್ಗೆ ಕಟ್ಟುನಿಟ್ಟಾಗಿ ಅನುಪಾಲನಾ ವರದಿ ನೀಡುವಂತೆ ಸೂಚಿಸಿ ಸಭೆಯಲ್ಲಿ ಹಾಜರಿದ್ದ ಎಲ್ಲಾ ವಿದ್ಯುತ್ ಗ್ರಾಹಕರಿಗೆ ಧನ್ಯವಾದಗಳನ್ನು ತಿಳಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ತಮ್ಮ ವಿಶ್ವಾಸಿ

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನಾ ಉಪ ವಿಭಾಗ
ಚಾವಿಸನಿನಿ., ಸರಗೂರು.

ಪ್ರತಿಗಳು:-

1. ಮಾನ್ಯ ಪ್ರಧಾನ ವ್ಯವಸ್ಥಾಪಕರು (ಅ ಮತ್ತು ಮಾಸಂ),ಚಾವಿಸನಿನಿ ನಿಗಮ ಕಛೇರಿ ಮೈಸೂರುರವರ ಮಾಹಿತಿಗಾಗಿ
2. ಮಾನ್ಯ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ),ಚಾವಿಸನಿನಿ ನಿಗಮ ಕಛೇರಿ ಮೈಸೂರುರವರ ಮಾಹಿತಿಗಾಗಿ
3. ಮುಖ್ಯ ಇಂಜಿನಿಯರ್ (ವಿ), ಚಾವಿಸನಿನಿ, ವಲಯ ಕಛೇರಿ ಮೈಸೂರು ರವರ ಮಾಹಿತಿಗಾಗಿ
4. ಅಧೀಕ್ಷಕ ಇಂಜಿನಿಯರ್ (ವಿ), ಚಾವಿಸನಿನಿ, ಕಾರ್ಯ ಮತ್ತು ಪಾಲನ ಮೈಸೂರು ವೃತ್ತ ಮೈಸೂರುರವರ ಮಾಹಿತಿಗಾಗಿ
5. ಕಾರ್ಯನಿರ್ವಾಹಕ ಇಂಜಿನಿಯರ್(ವಿ)ಚಾವಿಸನಿನಿ, ಕಾರ್ಯ ಮತ್ತು ಪಾಲನ ವಿಭಾಗಿಯ ಕಛೇರಿ,ಹುಣಸೂರುರವರ ಮಾಹಿತಿಗಾಗಿ.
6. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ನೋಡಲ್ ಅಧಿಕಾರಿ 220 ಕೆವಿ ಸ್ವೀಕರಣಾ ಕೇಂದ್ರ ಕಡಕೋಳ.
7. ಕಛೇರಿ ಪ್ರತಿ.